# 2012-13ನೇ ಸಾಲಿನ 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2ನೇ ಜೊತೆ ಉಚಿತ ಸಮವಸ್ತ್ರ ಸರಬರಾಜು:

## 2ನೇ ಜೊತೆ ಸಮವಸ್ತ್ರ ಪಡೆದಿರುವ ಫಲಾನುಭವಿಗಳ ವಿವರ:

| ಕ್ರ.ಸ. | ವರ್ಗ | ವಿದ್ಯಾರ್ಥಿಗಳ ಸಂಖ್ಯೆ | ಘಟಕ ವೆಚ್ಚ | ಒಟ್ಟು ಅನುದಾನ |
|---|---|---|---|---|
| 1 | ಎಲ್ಲಾ ವರ್ಗದ ಹೆಣ್ಣು ಮಕ್ಕಳು | | 200/- | |
| 2 | ಪರಿಶಿಷ್ಟ ಜಾತಿ ಬಾಲಕರು | | 200/- | |
| 3 | ಪರಿಶಿಷ್ಟ ವರ್ಗದ ಬಾಲಕರು | | 200/- | |
| 4 | ಬಿ.ಪಿ.ಎಲ್ ವರ್ಗದ ಬಾಲಕರು | | 200/- | |
| 5 | ಇತರೆ ವರ್ಗದ ಬಾಲಕರು | | 200/- | |

ಕೇಂದ್ರ ಸರ್ಕಾರದ ಸರ್ವ ಶಿಕ್ಷಣ ಅಭಿಯಾನವು 2012-13ನೇ ಸಾಲಿನ ಪಿ.ಎ.ಬಿಯಲ್ಲಿ 37,56,358 ವಿದ್ಯಾರ್ಥಿಗಳಿಗೆ 7512.726 ಲಕ್ಷ ರೂಗಳು 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವರ್ಗದ ಹೆಣ್ಣು ಮಕ್ಕಳು, ಪರಿಶಿಷ್ಟ ಜಾತಿಯ ಬಾಲಕರು, ಪರಿಶಿಷ್ಟ ವರ್ಗದ ಬಾಲಕರು ಮತ್ತು ಬಿಪಿಎಲ್ ವರ್ಗದ ಬಾಲಕರಿಗೆ 2ನೇ ಜೊತೆ ಉಚಿತ ಸಮವಸ್ತ್ರ ಸರಬರಾಜು ಮಾಡಲು ಅನುದಾನ ಮಂಜೂರು ಮಾಡಲಾಗಿತ್ತು. 8,94,731 ಇತರೆ ವರ್ಗದ ಬಾಲಕರಿಗೆ 2ನೇ ಜೊತೆ ಕೇಂದ್ರ ಸರ್ಕಾರದ ಎಂ.ಎಚ್.ಆರ್.ಡಿ ಅನುದಾನ ನೀಡದ ಪ್ರಯುಕ್ತ ಇತರೆ ವರ್ಗದ ಬಾಲಕರಿಗೆ ಸಮವಸ್ತ್ರ ಒದಗಿಸಲು ಪ್ರತಿ ವಿದ್ಯಾರ್ಥಿಗೆ ಘಟಕವೆಚ್ಚ 200/- ರೂ ಗಳಂತೆ ಒಟ್ಟು 17.89 ಕೋಟಿ ರೂ ಗಳ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರಂತೆ ರಾಜ್ಯ ಸರ್ಕಾರವು ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ರಾಜ್ಯ ಸರ್ಕಾರದ ಪಾಲಿನಲ್ಲಿ ಈ ಅನುದಾನ ಭರಿಸುವಂತೆ ಆದೇಶ ನೀಡಿತು.

## ಸಮವಸ್ತ್ರ ಸರಬರಾಜುದಾರರ ಆಯ್ಕೆ:

2012-13ನೇ ಸಾಲಿನಲ್ಲಿ 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಉಚಿತ ಸಮವಸ್ತ್ರ ಸರಬರಾಜು ಮಾಡಲು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಯಿತು. ಈ ಪ್ರಕ್ರಿಯೆಯಲ್ಲಿ 7 ಸಮವಸ್ತ್ರ ಸರಬರಾಜುದಾರರು ಅರ್ಜಿ ಸಲ್ಲಿಸಿದ್ದರು. ಇದರಲ್ಲಿ ಎಲ್-1 ದರ ನಮೂದಿಸಿದ ಕಂಪನಿಗಳ ಜೊತೆಗೆ ಎಲ್-1 ದರದ ಶೇ 10% ಕಡಿಮೆದರ ನಮೂದಿಸಿದ ಏಜೆನ್ಸಿಗಳನ್ನು ಆಯ್ಕೆ ಮಾಡಲಾಯಿತು. ಇದರಲ್ಲಿ ಎಲ್-1 ದರದ ಶೇ 10% ಕಡಿಮೆದರ ನಮೂದಿಸಿದ 4 ಕಂಪನಿಗಳೊಂದಿಗೆ ನೆಗೋಷಿಯೇಶನ್ ನಡೆಸಿ, 5 ಕಂಪನಿಗಳನ್ನು ಎಂಪ್ಯಾನಲ್ಡ್ ಏಜೆನ್ಸಿಗಳೆಂದು ಗುರುತಿಸಲಾಯಿತು. ಆಯ್ಕೆಯಾದ 5 ಎಂಪ್ಯಾನಲ್ಡ್ ಏಜೆನ್ಸಿಗಳು ಶಾಲೆಗಳಿಂದ ನೇರವಾಗಿ ಬೇಡಿಕೆ ಪಟ್ಟಿ ಪಡೆದು ಸಮವಸ್ತ್ರ ಸರಬರಾಜಿಗೆ ಕ್ರಮವಹಿಸಲಾಯಿತು. ಆಯ್ಕೆಯಾದ 5 ಎಂಪ್ಯಾನಲ್ಡ್

ಏಜೆನ್ಸಿಗಳು ಎಸ್.ಡಿ.ಎಂ.ಸಿ/ಶಾಲೆಗಳಿಂದ ಸಮವಸ್ತ್ರದ ಬಣ್ಣ, ಅಳತೆ, ಮೌಲ್ಯ ಖಾತ್ರಿಪಡಿಸಿಕೊಂಡ ನಂತರ ಸಮವಸ್ತ್ರ ಸಿದ್ದಪಡಿಸಲು ಕ್ರಮವಹಿಸಲಾಯಿತು. ಶೇ.75% ರಷ್ಟು ಸಮವಸ್ತ್ರ ಸಿದ್ದಪಡಿಸಿದ ನಂತರ ಕಂಪನಿಯವರು ಸಮವಸ್ತ್ರ ಸಿದ್ದಪಡಿಸುವ ಘಟಕಕ್ಕೆ ಭೇಟಿ ನೀಡುವಂತೆ ಪತ್ರ ನೀಡಿದ ನಂತರ ಸರ್ವ ಶಿಕ್ಷಣ ಅಭಿಯಾನದ ಅಧಿಕಾರಿಗಳನ್ನು ಗುಣಮಟ್ಟ ಪರಿಶಿಲನೆಗೆ ಭೇಟಿ ನೀಡಲಾಯಿತು.

**ಸಮವಸ್ತ್ರದ ಗುಣಮಟ್ಟ ಪರಿಶೀಲನೆ:**

ಶೇ 75% ರಷ್ಟು ಸಮವಸ್ತ್ರ ಸರಬರಾಜದ ನಂತರ 5 ಎಂಪ್ಯಾನಲ್ಡ್ ಏಜೆನ್ಸಿಗಳಿಗೆ ಭೇಟಿ ನೀಡಿ, ಸರ್ವ ಶಿಕ್ಷಣ ಅಭಿಯಾನದ ಅಧಿಕಾರಿಗಳು ಘಟಕಗಳಿಂದ ಸಮವಸ್ತ್ರದ ಸ್ಯಾಂಪಲ್ ಡ್ರಾ ಮಾಡಿ ತರಲಾಯಿತು. ಟೆಂಡರ್ ದಾಖಲೆಯಲ್ಲಿ ಸೂಚಿಸಿದಂತೆ ಕೇಂದ್ರ ಸರ್ಕಾರದ ಸಿ.ಎಸ್.ಟಿ.ಆರ್.ಐ ಸಂಸ್ಥೆಯಲ್ಲಿ ಸಮವಸ್ತ್ರ ಗುಣಮಟ್ಟ ಪರಿಶೀಲಿಸಲಾಯಿತು. ಗುಣಮಟ್ಟ ಪರಿಶಿಲನೆಯ ನಂತರ ಶಾಲೆಗಳಿಗೆ ಸರಬರಾಜು ಮಾಡಲು ಎಂಪ್ಯಾನಲ್ಡ್ ಏಜೆನ್ಸಿಗಳಿಗೆ ಆದೇಶ ನೀಡಲಾಯಿತು.

**ಶಾಲೆಗಳಿಗೆ ಸಮವಸ್ತ್ರ ಅನುದಾನ ಬಿಡುಗಡೆ:**

ಕೇಂದ್ರ ಸರ್ಕಾರದ ಎಂ.ಎಚ್.ಆರ್.ಡಿ 37,56,358 ಎಲ್ಲಾ ವರ್ಗದ ಹೆಣ್ಣು ಮಕ್ಕಳು, ಪರಿಶಿಷ್ಠ ಜಾತಿಯ ಬಾಲಕರು, ಪರಿಶಿಷ್ಠ ವರ್ಗದ ಬಾಲಕರು ಮತ್ತು ಬಿಪಿಎಲ್ ವರ್ಗದ ಬಾಲಕರಿಗೆ ಸಮವಸ್ತ್ರ ನೀಡಲು ಘಟಕವೆಚ್ಚ 200/- ರೂ ಗಳಂತೆ ಒಟ್ಟು 75.12 ಕೋಟಿ ರೂಗಳನ್ನು ಬಿಡುಗಡೆ ಮಾಡಲಾಗಿತ್ತು. ಇತರೆ ವರ್ಗದ 8.94 ಲಕ್ಷ ಬಾಲಕರಿಗೆ ರಾಜ್ಯ ಸರ್ಕಾರದ ವತಿಯಿಂದ 2ನೇ ಜೊತೆ ಸಮವಸ್ತ್ರ ವಿತರಿಸಲು 17.89 ಕೋಟಿ ರೂಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ 75.12 ಕೋಟಿ ರೂಗಳನ್ನು ಜಿಲ್ಲಾವಾರು ಉಪನಿರ್ದೇಶಕರ ಕಛೇರಿಗೆ ಬಿಡುಗಡೆ ಮಾಡಲಾಯಿತು. ಜಿಲ್ಲಾ ಉಪನಿರ್ದೇಶಕರು ಶಾಲಾವಾರು ಎಸ್.ಡಿ.ಎಂ.ಸಿ ಖಾತೆಗಳಿಗೆ ನೇರವಾಗಿ ಅನುದಾನ ಬಿಡುಗಡೆ ಮಾಡಿರುತ್ತಾರೆ. ಶಾಲೆಗಳಿಗೆ ಬಿಡುಗಡೆಯಾದ ಅನುದಾನವನ್ನು ನಿಗದಿಪಡಿಸಿದ ಬೆಲೆಗೆ ಅನುಸಾರವಾಗಿ ಖರೀದಿಸಿ, ಎಂಪ್ಯಾನಲ್ಡ್ ಏಜೆನ್ಸಿಯವರಿಗೆ ಬಿಲ್ಲಿನ ಮೊತ್ತವನ್ನು ಶಾಲೆಯವರು ಪಾವತಿಸಿರುತ್ತಾರೆ. ಅನುದಾನದ ಕೊರತೆಯಿರುವ ಶಾಲೆಗಳು ಸರಬರಾಜುದಾರರಿಗೆ ಬಿಲ್ಲಿನ ಮೊತ್ತವನ್ನು ಪಾವತಿಸಿರುವುದಿಲ್ಲ. ಬಿಲ್ಲಿನ ಮೊತ್ತವನ್ನು ಪಾವತಿಸಿದ ನಂತರ ಬಾಕಿ ಉಳಿದ ಮೊತ್ತದಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹೊಲಿಸಿಕೊಡಲು ಶಾಲೆಯ ಎಸ್.ಡಿ.ಎಂ.ಸಿ/ಶಾಲೆಗಳು ಕ್ರಮಕೈಗೊಂಡು, ಈಗಾಗಲೇ ಜಿಲ್ಲೆಗಳಲ್ಲಿ ಸಮವಸ್ತ್ರ ಹೊಲಿಸಿ, ಧರಿಸಿರುವುದು ಕಂಡು ಬಂದಿರುತ್ತದೆ.

**ಗುಣಾತ್ಮಕ ಆಯಾಮಗಳಿಗಾಗಿ ಮೇಲುಸ್ತುವಾರಿ ಸಾಧಕಗಳು:**

ಭಾರತ ಸರ್ಕಾರದ ಸರ್ವ ಶಿಕ್ಷಣ ಅಭಿಯಾನವು 6 ರಿಂದ 14 ವರ್ಷದ ವಯೋಮಾನದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಹಂತದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕೆಂದು ಸರ್ವ ಶಿಕ್ಷಣ ಅಭಿಯಾನ

ಯೋಜನೆಯ ಮೂಲಕ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. 2005 ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಸೂಚಿಸಿರುವಂತೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಬದ್ಧತೆಯನ್ನು ಸೂಚಿಸಿದೆ. ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಕೆಲವು ಆಯಾಮಗಳಲ್ಲಿ ಬದಲಾವಣೆ ತರಬೇಕಾಗುತ್ತದೆ. ಅಂತಹ ಅಯಾಮಗಳೆಂದರೆ:

- ಮೂಲಭೂತ ಸೌಲಭ್ಯ
- ನಿರ್ವಹಣೆ ಮತ್ತು ಸಮುದಾಯದ ಸಹಕಾರ
- ಶಾಲೆ ಮತ್ತು ತರಗತಿ ದಾಖಲಾತಿ ಮತ್ತು ಹಾಜರಾತಿ
- ಪಠ್ಯಕ್ರಮ ಮತ್ತು ಬೋಧನೆ, ಕಲಿಕಾ ಸಾಮಗ್ರಿಗಳು
- ಶಿಕ್ಷಕ ಮತ್ತು ಶಿಕ್ಷಕನ ಪೂರ್ವ ತಯಾರಿ
- ಸಮಯಾವಕಾಶ (ಬೋಧನೆ ಮತ್ತು ಕಲಿಕಾ ಸಮಯ)
- ತರಗತಿ ಚಟುವಟಿಕೆ ಮತ್ತು ನಿರ್ವಹಣೆ
- ಕಲಿಕಾರ್ಥಿಯ ಮೌಲ್ಯಮಾಪನ ಮತ್ತು ನಿರ್ವಹಣೆ ಮತ್ತು ಮೇಲುಸ್ತುವಾರಿ

ಮಕ್ಕಳ ಪ್ರವೇಶ ಅವಕಾಶ, ದಾಖಲಾತಿ ಮತ್ತು ಉಳಿಸಿಕೊಳ್ಳುವಿಕೆಯಲ್ಲಿ ಗಮನಾರ್ಹ ಪ್ರಗತಿಯಾಗಿದ್ದರೂ ಗುಣಾತ್ಮಕತೆಗೆ ಸಂಬಂಧಿಸಿದಂತೆ ಪರಿಹರಿಸಬೇಕಾದ ಹಾಗೂ ಉಸ್ತುವಾರಿ ನೋಡಬೇಕಾದ ವಿವಾದಾಂಶಗಳು ಹಾಗೆಯೇ ಉಳಿದಿವೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ – ಇವರು ಸರ್ವ ಶಿಕ್ಷಣ ಅಭಿಯಾನ ಆಶ್ರಯದಲ್ಲಿ ಉಸ್ತುವಾರಿ ಮತ್ತು ಮೇಲ್ವಿಚಾರಣೆಗೆಂದು ಒಂದು ಬೃಹತ್ ಕಾರ್ಯಕ್ರಮವನ್ನು ಜಾರಿಗೊಳಿಸಲು ಮುಂದೆ ಬಂದಿದ್ದಾರೆ. ಎನ್.ಸಿ.ಇ.ಆರ್.ಟಿ ಸಂಸ್ಥೆಗೆ 2007-2008 ರ ಅವಧಿಯಿಂದ ವಿಶಾಲ ಪರಾಮರ್ಶನೆಯನ್ನು ಆಧರಿಸಿ ಗ ಉಳಿದಿವೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರ – ಇವರು ಸರ್ವ ಶಿಕ್ಷಣ ಅಭಿಯಾನ ಆಶ್ರಯದಲ್ಲಿ ಉಸ್ತುವಾರಿ ಮತ್ತು ಮೇಲ್ವಿಚಾರಣೆಗೆಂದು ಒಂದು ಬೃಹತ್ ಕಾರ್ಯಕ್ರಮವನ್ನು ಜಾರಿಗೊಳಿಸಲು ಮುಂದೆ ಬಂದಿದ್ದಾರೆ. ಎನ್.ಸಿ.ಇ.ಆರ್.ಟಿ ಸಂಸ್ಥೆಗೆ 2007-2008 ರ ಅವಧಿಯಿಂದ ವಿಶಾಲ ಪರಾಮರ್ಶನೆಯನ್ನು ಆಧರಿಸಿ ಗುಣಾತ್ಮಕತೆಯ ಆಯಾಮಗಳಿಗೆ ಉಸ್ತುವಾರಿ ನಮೂನೆಗಳನ್ನು ವಿಕಾಸಗೊಳಿಸುವ ಕಾರ್ಯವನ್ನು ವಹಿಸಲಾಗಿತ್ತು. ಎನ್.ಸಿ.ಇ.ಆರ್.ಟಿ ಯಿಂದ ಕೊಡಲಾದ ಮಾರ್ಗದರ್ಶಿಯ ಆಧಾರದ ಮೇಲೆ ಗುಣಾತ್ಮಕತೆಯ ಉಸ್ತುವಾರಿ ಉಪಕರಣಗಳನ್ನು ಪರಿಷ್ಕರಿಸಲಾಗಿದೆ. ವಾರ್ಷಿಕ ಎರಡು ಬಾರಿ ಕ್ರೋಢೀಕೃತ ಪ್ರಗತಿಯನ್ನು ಕಳಿಸಲಾಗುತ್ತದೆ. ಈ ನಮೂನೆಗಳು ಹಾಜರಾತಿ, ಸಮುದಾಯ ಸಹಭಾಗಿತ್ವ, ತರಗತಿಯ ಚಟುವಟಿಕೆಗಳು ಮತ್ತು ಕಲಿಕಾ ಸಾಧನೆಗಳ ಮೇಲೆ ಪ್ರಕಾಶ ಬೀರುತ್ತವೆ.

ಕ್ಯೂ.ಎಂ.ಟಿ ನಮೂನೆಗಳಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ದೃಷ್ಟಿಯಿಂದ ಕೆಲವು ಆಯಾಮಗಳನ್ನು ನಮೂನೆಗಳಲ್ಲಿ ಅಳವಡಿಸಲಾಗಿದೆ.

- ಮಕ್ಕಳ ಹಾಜರಾತಿ
- ಸಮುದಾಯದ ಸಹಕಾರ ಮತ್ತು ಸಹಭಾಗಿತ್ವ
- ಶಿಕ್ಷಕ ಮತ್ತು ಶಿಕ್ಷಕರ ತಯಾರಿ
- ಪಠ್ಯಕ್ರಮ ಮತ್ತು ಬೋಧನೆ ಮತ್ತು ಕಲಿಕಾ ಸಾಮಗ್ರಿ
- ತರಗತಿ ನಿರ್ವಹಣೆ
- ಕಲಿಕಾರ್ಥಿಯ ಮೌಲ್ಯಮಾಪನ, ನಿರ್ವಹಣೆ ಮತ್ತು ಮೇಲುಸ್ತುವಾರಿ

ಎನ್.ಸಿ.ಇ.ಆರ್.ಟಿ ಯ ನಿರ್ದೇಶನದಂತೆ ಕ್ಯೂ.ಎಂ.ಟಿ ನಮೂನೆಗಳನ್ನು ಪರಿಷ್ಕರಿಸಿ, ಪ್ರಾದೇಶಿಕ ಭಾಷೆಗೆ ಭಾಷಾಂತರಿಸಿ, ಮುದ್ರಿಸಿ ಶಾಲೆಗಳಿಗೆ,ಕ್ಲಸ್ಟರ್ ಮತ್ತು ಬ್ಲಾಕ್‌ನ ಬಿ.ಆರ್.ಸಿ ಕೇಂದ್ರಗಳಿಗೆ ಸರಬರಾಜು ಮಾಡಲಾಗಿದೆ. ಸಂಗ್ರಹಿತವಾದ ಮಾಹಿತಿಗಳನ್ನು ವಾರ್ಷಿಕ ಎರಡು ಹಂತಗಳಲ್ಲಿ ಎನ್.ಸಿ.ಇ.ಆರ್.ಟಿಗೆ ಮಾಹಿತಿಯನ್ನು ಸಲ್ಲಿಸಲಾಗುತ್ತಿದೆ. ಮೇಲುಸ್ತುವಾರಿ ನಮೂನೆಯಲ್ಲಿ ಶಾಲಾ ಪ್ರಗತಿಯ ಪರಿಶಿಲನೆ, ದಾಖಲಾತಿ ಪರಿಶೀಲನೆ, ಪರಿಹಾರೋಪಾಯಗಳು ಶಾಲೆಗೆ ಸಂಬಂಧಿಸಿದ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿದೆ.

ಪ್ರಗತಿಯ ಪಕ್ಷನೋಟ:

ನಮೂನೆಗಳ ವಿಕಾಸ ಪ್ರಕ್ರಿಯೆ:

ಗುಣಾತ್ಮಕತೆಯ ವಿವಾದಾಂಶಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಬಗೆಹರಿಸಲು, ಸರ್ವ ಶಿಕ್ಷಣ ಅಭಿಯಾನವು ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಹಿರಿಯ ಸಮಾಲೋಚಕರು ಮತ್ತು ಇತರೆ ಕ್ಷೇತ್ರ ಮಟ್ಟದ ಅಧಿಕಾರಿಗಳು ಮುಕ್ತ ಅಂಚಿನ ಸಂಕೇತಗಳನ್ನು ರಾಚನಿಕ/ಸೂತ್ರ ಬದ್ಧವಾಗಿ ರೂಪಾಂತರಗೊಳಿಸಲು ಈ ಸಮಿತಿಯು ನಿರ್ಧರಿಸಿತು, ಸಲಹೆಗಳು ಮತ್ತು ಶಿಫಾರಸುಗಳನ್ನು ಆಧರಿಸಿ ಉಪಕರಣಗಳನ್ನು ಪರಿಷ್ಕರಿಸಿ ರೂಪಾಂತರಗೊಳಿಸಲಾಯಿತು.

ಹಲವಾರು ಸಭೆಗಳನ್ನು ನಡೆಸಿ ವಿವಾದಾಂಶಗಳನ್ನು ವಿಸ್ತೃತವಾಗಿ ಚರ್ಚಿಸಲಾಯಿತು. ನಮೂನೆಗಳನ್ನು ಭರ್ತಿ ಮಾಡುವುದು ಹೊರೆಯಾಗಬಾರದೆಂದು ಅಥವಾ ಹೆಚ್ಚು ಕಾರ್ಯಭಾರದಂತಾಗಬಾರದು ಎಂಬ ದೃಷ್ಟಿಯಿಂದ ನಮೂನೆಗಳನ್ನು ಪರಿಷ್ಕರಿಸಿ, ರೂಪಾಂತರಿಸಿ ವಸ್ತುನಿಷ್ಠ ಮಾದರಿಗೆ ತರಲಾಯಿತು. ಪ್ರತಿಯೊಂದು ಪ್ರಶ್ನೆಯೂ ಬಹು ಆಯ್ಕೆಯ ರೂಪದ್ದಾಗಿದ್ದು ಸಂಕೇತಗಳನ್ನು ಹೊಂದಿದ್ದವು ಹಾಗೂ ಆಯ್ಕೆಯ ಉತ್ತರಗಳೂ ಸಹ ಸಂಕೇತಗಳನ್ನು ಹೊಂದಿದ್ದವು ಬಹಳಷ್ಟು ಪ್ರಶ್ನೆಗಳು ಚೆಕ್ ಮಾಡುವುದರ ಮೂಲಕ ಅಥವಾ ಸಂಕೇತವನ್ನು ಉಲ್ಲೇಖಿಸುವುದರ ಮೂಲಕ ಉತ್ತರಿಸುವಂತಿದ್ದವು, ಕೆಲವು ಸಂದರ್ಭಗಳಲ್ಲಿ ಪ್ರಶ್ನೆಗಳು ವೀಕ್ಷಕರು ಒಂದು ಒಂದಕ್ಕಿಂತ ಹೆಚ್ಚು ಬಾರಿ ಗುರುತು/ಟಿಕ್ ಮಾಡುವಂತಿದ್ದವು.

ಈ ನಮೂನೆಯನ್ನು ಮೂರು ತಿಂಗಳಿಗೊಮ್ಮೆ ಭರ್ತಿ ಮಾಡಬೇಕು. ರಾಜ್ಯವು ಬೇರೆ ರೀತಿಯ ಶೈಕ್ಷಣಿಕ ವರ್ಷದ ಕ್ರಮವನ್ನು ಅನುಸರಿಸುವುದರಿಂದ ಒಂದು ಶೈಕ್ಷಣಿಕ ವರ್ಷದಲ್ಲಿ ಮಾಹಿತಿಯನ್ನು ಎರಡು ಮಾಸತ್ರಯಗಳಿಗೆ ಒಮ್ಮೆ ಸಂಗ್ರಹಿಸಲಾಗುವುದು. ವಿವರಗಳು ಈ ಕೆಳಗಿನಂತಿವೆ.

| | ಮಾಸಗಳ ವ್ಯಾಪ್ತಿ | ಸಲ್ಲಿಸಬೇಕಾದ ಮಾಸ |
|---|---|---|
| ಮೊದಲನೆಯ ಮಾಸತ್ರಯ | ಜೂನ್ - ಸೆಪ್ಟಂಬರ್ | ನವೆಂಬರ್ |
| ಎರಡನೆಯ ಮಾಸತ್ರಯ | ನವೆಂಬರ್ – ಮಾರ್ಚ್ | ಮೇ |

ಈ ನಮೂನೆಗಳ ಉಸ್ತುವಾರಿ ಕ್ಲಸ್ಟರ್‌ನಿಂದ ರಾಜ್ಯದವರೆಗಿನ ವಿವಿಧ ಸ್ತರಗಳಲ್ಲಿ ನಡೆಯುವುದರಿಂದ ವ್ಯವಸ್ಥಿತ ಉಸ್ತುವಾರಿಗಾಗಿ ರಾಜ್ಯದ ನಾಲ್ಕು ವಿಭಾಗಗಳಲ್ಲಿ ನಮೂನೆಗಳನ್ನು ಭರ್ತಿ ಮಾಡುವ ಬಗ್ಗೆ ಬಿ.ಆರ್.ಸಿ., ಬಿ.ಆರ್.ಪಿ ಮತ್ತು ಡಯಟ್‌ನ ನೋಡಲ್ ಅಧಿಕಾರಿಗಳಿಗೆ ಒಂದು ದಿನದ ತರಬೇತಿಯನ್ನು ರಾಜ್ಯದ ನಾಲ್ಕು ವಿಭಾಗಗಳಲ್ಲಿ ನಡೆಸಲಾಯಿತು. ಶಾಲೆಯ ಮುಖ್ಯಶಿಕ್ಷಕರಿಗೆ ಒಂದು ದಿನದ ಉಪಗ್ರಹ ಆಧರಿತ ತರಬೇತಿಯನ್ನು ನೀಡಲಾಯಿತು. ಭಾಗವಹಿಸಿದವರ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿಭಾಗ | ಕಾರ್ಯಾಗಾರದ ಸ್ಥಳ | ದಿನಾಂಕ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 1 | ಗುಲಬರ್ಗಾ | ಗುಲಬರ್ಗಾ | 07-09-12 | 90 |
| 2 | ಧಾರವಾಡ | ಡಯಟ್ ಧಾರವಾಡ | 07-09-12 | 155 |
| 3 | ಬೆಂಗಳೂರು | ಡಯಟ್ ಬೆಂ.ಗ್ರಾ | 12-09-12 | 146 |
| 4 | ಮೈಸೂರು | ಡಯಟ್ ಮೈಸೂರು | 10-09-12 | 149 |
| 5 | ಉಪಗ್ರಹ ತರಬೇತಿ | ಡಿ.ಎಸ್.ಇ.ಆರ್.ಟಿ | 15-09-12 | |
| 6 | ವಿಶ್ಲೇಷಣಾ ಕಾರ್ಯಾಗಾರ | ಸರ್ವ ಶಿಕ್ಷಣ ಅಭಿಯಾನ | 20-12-12 | 30 |